ಇ) ಬಚಾವತ್ ಶೀರ್ಮಾನದ ಪ್ರಕಾರ ಈ ನೀರಿನ ಉಪಯೋಗ ಪಡೆಯಲು ಸರ್ಕಾರದವರು ಉದ್ದೇಶಿಸಿದ್ದಾರೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ಸ್ಕೀಮ್ 'ಎ' ನಲ್ಲಿ ಬಚಾವತ್ ನದಿಯ ಪ್ರಕಾರ ವಿವಿಧ ರಾಜ್ಯಗಳಿಗೆ ಹಂಚಿರುವ ನೀರಿನ ಪ್ರಕರಣ :

೧.	ಕರ್ನಾಟಕ	೭೩೪ ಟಿಎಂಸಿ
೨.	ಆಂಧ್ರ ಪ್ರದೇಶ	೪೧೧ ಟಿಎಂಸಿ
೩.	ಮಹಾರಾಷ್ಟ್ರ	೫೮೫ ಟಿಎಂಸಿ

ಆ) ಕರ್ನಾಟಕಕ್ಕೆ ೭೩೪ ಟಿಎಂಸಿ ದೊರೆಯಂತ್ತಿದ್ದು ಈ ನೀರನ್ನು ಉಪಯೋಗಿಸಿಕೊಳ್ಳಲು ಶಯಾರಿಸಿರುವ ಮಾಸ್ಟರ್ ಪ್ಲಾನ್‌ನ ವಿವರ ಕೆಳಗಿನಂತಿದೆ :

೧.	ಈಗಾಗಲೇ ಮುಗಿದಿರುವ ಯೋಜನೆಗಳು	೩೯೮.೮೪ ಟಿಎಂಸಿ
೨.	ನಿರ್ಮಾಣ ಹಂತದಲ್ಲಿರುವ ಯೋಜನೆಗಳು	೨೫೮.೫೪ ಟಿಎಂಸಿ
೩.	ಮುಂದೆ ನಿರ್ಮಾಣ ಮಾಡಲಿರುವ ಯೋಜನೆಗಳು	೮೭.೪೨ ಟಿಎಂಸಿ
	ಒಟ್ಟು	೭೩೪ ಟಿಎಂಸಿ

ಭದ್ರಾ ಮೇಲ್ದಂಡೆ ಯೋಜನೆಗೆ ೮ ಟಿಎಂಸಿ ನೀರನ್ನು ಕಾದಿರಿಸಲಾಗಿದ್ದು ಯೋಜನೆಯು ಅನ್ವೇಷಣೆಯಲ್ಲಿದೆ.

ಇ) ಹೌದು

ದೇವನೂರು ಎಡ ಮತ್ತು ಬಲದಂಡೆ ನಾಲೆ ಕೆಲಸದ ಬಗ್ಗೆ

೩೪೨. ಶ್ರೀಪತಿ ಸುಮಾ ವಸಂತ (ವೀರಾಜಪೇಟೆ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆ ವೀರಾಜಪೇಟೆ ತಾಲ್ಲೂಕಿನ ದೇವನೂರು ಗ್ರಾಮದಲ್ಲಿ ನಿರ್ಮಿಸಲಾದ ದೇವನೂರು ಎಡ ಮತ್ತು ಬಲದಂಡೆ ನಾಲೆ ಕೆಲಸ ಯಾವ ಹಂತದಲ್ಲಿದೆ ;

ಆ) ಸದರಿ ಕಾಮಗಾರಿಯನ್ನು ಸ್ಥಗಿತಗೊಳಿಸಿರುವುದು ನಿಜವೆ ;

ಇ) ಹಾಗಿದ್ದಲ್ಲಿ, ಅದಕ್ಕೆ ಕಾರಣವೇನು ;

ಈ) ಈ ಮೇಲ್ಕಂಡ ಕೆಲಸ ಪ್ರಾರಂಭ ವಾದದ್ದು ಯಾವಾಗ ಹಾಗೂ ಇದಕ್ಕೆ ಈವರೆಗೆ ಎಷ್ಟು ವೆಚ್ಚವಾಗಿದೆ ;

ಉ) ವೀರಾಜಪೇಟೆಯ ವಡ್ಡರಪಾಡು ಕಟ್ಟೆಯ ಕೆಲಸ ಯಾವ ಹಂತದಲ್ಲಿದೆ ;

ಊ) ಈವರೆಗೆ ಈ ಕಟ್ಟೆಗೆ ಖರ್ಚಾದ ಹಣವೆಷ್ಟು, ಇದನ್ನು ಯಾವಾಗ ಪೂರ್ಣ ಮಾಡ ಲಾಗುವುದು ಹಾಗೂ ಈ ಕಟ್ಟೆಗೆ ೧೯೮೭–೮೮ಕ್ಕೆ ಮಂಜೂರಾದ ಹಣವೆಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಯವರು).—

ಅ) ಈ ಕೆಲಸವು ೧೯೧೮ ರಲ್ಲಿಯೇ ನಿರ್ಮಾಣವಾಗಿರುತ್ತೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಈ ಕೆಲಸವು ೧೯೧೮ರಲ್ಲಿಯೇ ನಿರ್ಮಾಣವಾಗಿರುವುದರಿಂದ ಮಾಹಿತಿಗಳು ಲಭ್ಯವಿರುವುದಿಲ್ಲ

ಉ) ಏರಿ ಮತ್ತು ಕೋಡಿ ಕೆಲಸವು ಪೂರ್ಣಗಿದಿದ್ದು, ಕಾಲುವೆ ನಿರ್ಮಾಣದ ಸಮಯದಲ್ಲಿ ಭೂಸ್ವಾಧೀನತೆಯ ತೊಂದರೆಯಿಂದಾಗಿ ಕೆಲಸವು ಸ್ಥಗಿತಗೊಂಡಿದೆ.

ಊ) ರೂ. ೧೧.೮೧ ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಭೂಸ್ವಾಧೀನತೆಯ ತಕರಾರು ಬಂದಿದ ನಂತರ ಕೆಲಸವನ್ನು ಪೂರ್ಣಗೊಳಿಸಲಾಗುವುದು. ೧೯೮೭-೮೮ನೇ ಸಾಲಿನಲ್ಲಿ ರೂ. ೫೦,೦೦೦ ಬಂಜೂರಾಗಿದೆ.

ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನ ವಡ್ಡರಮಾಡು ಕಟ್ಟೆಗೆ ಬಿಡುಗಡೆ ಮಾಡಿದ ಹಣದ ಬಗ್ಗೆ

೪೨೭. ಶ್ರೀಮತಿ ಸುಮಾ ವಸಂತ (ವಿರಾಜಪೇಟೆ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕಿನಲ್ಲಿ ಬಾಳಲೆ ಮಂಡಲಕ್ಕೆ ಸೇರಿದ ವಡ್ಡರಮಾಡು ಕಟ್ಟೆಗೆ ಒಟ್ಟು ಬಿಡುಗಡೆಯಾದ ಹಣವೆಷ್ಟು ;

ಆ) ಇಲ್ಲಿಯವರೆಗೆ ವೆಚ್ಚವಾದ ಹಣವೆಷ್ಟು ;

ಇ) ವಡ್ಡರಮಾಡುಕಟ್ಟೆ ಯೋಜನೆಯಿಂದ ಎಷ್ಟು ಎಕರೆ ಜಮೀನು ವ್ಯವಸಾಯಕ್ಕೆ ಒಳಪಡುತ್ತದೆ ;

ಈ) ಈಗ ಈ ಕೆಲಸ ಯಾವ ಹಂತದಲ್ಲಿದೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ೧೭.೪೪ ಲಕ್ಷ ರೂ.ಗಳು

ಆ) ೧೧.೮೧ ಲಕ್ಷ ರೂ.ಗಳು

ಇ) ೫೬೦ ಎಕರೆಗಳು

ಈ) ಎರಿ ಪುತ್ತು ಕೋಡಿ ಕೆಲಸಗಳು ಪೂರ್ಣಗೊಂಡಿದ್ದು ಕಾಲುವೆ ನಿರ್ಮಾಣದ ಸಮಯದಲ್ಲಿ ಭೂ ಸ್ವಾಧೀನತೆಯ ತೊಂದರೆಯಿಂದಾಗಿ ಕೆಲಸವು ಸ್ಥಗಿತಗೊಂಡಿದೆ.

ದೇವಸ್ಥಾನಗಳ ನಿಧಿಯಿಂದ ಸರಕಾರಕ್ಕೆ ಸಂದಾಯವಾದ ಮೊಬಲಗಿನ ಬಗ್ಗೆ

೪೯೮. ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದೇವಸ್ಥಾನಗಳ ನಿಧಿಯಿಂದ ಸರ್ಕಾರಕ್ಕೆ ೧೯೮೬ ರಿಂದ ಈವರೆವಿಗೆ ಸಂದಾಯವಾದ ಮೊಬಲಗೆಷ್ಟು ; (ಜಿಲ್ಲಾವಾರು ಹಾಗೂ ಸಾಲುವಾರು ಮಾಹಿತಿಯನ್ನೊದಗಿಸಬೇಕಾಗಿ ವಿನಂತಿ):

ಆ) ದೇವಸ್ಥಾನಗಳ ಅಭಿವೃದ್ಧಿಗಾಗಿ ಸರ್ಕಾರದವರು ಕೊಡಗು ಜಿಲ್ಲೆಯಲ್ಲಿ ಮಾಡಿದ ವೆಚ್ಚ ವೆಷ್ಟು ;

ಇ) ೧೯೮೬ ರಿಂದ ಈವರೆಗೆ ಯಾವ ಯಾವ ದೇವಸ್ಥಾನಕ್ಕೆ ಎಷ್ಟು ಹಣ ಮಂಜೂರು ಮಾಡಲಾಗಿದೆ ಹಾಗೂ ಎಷ್ಟು ವೆಚ್ಚ ಮಾಡಲಾಗಿದೆ (ವರ್ಷವಾರು ಮಾಹಿತಿಯನ್ನೊದಗಿಸಲಾಗಿ ವಿನಂತಿ)

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—

ಅ) ದೇವಸ್ಥಾನದ ನಿಧಿಯಿಂದ ಸರ್ಕಾರಕ್ಕೆ ನೇರವಾಗಿ ಮೊಬಲಗು ಸಂದಾಯವಾಗುವುದಿಲ್ಲ.

ಆ) ೧೯೮೬ ರಿಂದ ಈವರೆವಿಗೆ ರೂ. ೧೧,೨೪,೦೦೦-೦೦ಗಳನ್ನು ದೇವಾಲಯಗಳ ಅಭಿವೃದ್ಧಿಗಾಗಿ ಸರ್ಕಾರ ಬಿಡುಗಡೆ ಮಾಡಿದೆ.

ಇ) ಪಟ್ಟಿ ಲಗತ್ತಿಸಿದೆ.